ಅಭ್ಯಾಸ ಇಲ್ಲ ನಂಗೆ. ನಾನು ಹೊರಗಾದಾಗ ಅಮ್ಮ ಅದೇ ಕೋಣೇಲಿ ಅಷ್ಟು ದೂರದಲ್ಲಿ ಮಲಗ್ತಿದ್ರು' ಎನ್ನುತ್ತಾ ವೆಂಕಟರಾಮು ಬಾಗಿಲ ಹತ್ತಿರ ಲೇಪು ಬಿಚ್ಚಿಕೊಂಡು ಮಲಗಬೇಕೆಂದು ವಿನಂತಿಸಿಕೊಂಡಳು. ವಿನಂತಿಯಾ? ಅಪ್ಪಣೆಯಾ?

'ಹೇಳಿದ್ರೆ ನಾನು ಮಲಗ್ತಿದ್ದೆ. ಕಮಲ ಮಲಗ್ತಿದ್ಲು. ಕಾವಲು ಕಾಯೋಕೂ ಗಂಡನೇ ಆಗ್ಬೇಕಾ?' ಎಂದು ವೆಂಕಮ್ಮ ತಮಗನಿಸಿದ್ದನ್ನು ಹಿರಿ ಸೊಸೆಯೊಡನೆ ಹೇಳಿಕೊಂಡರು.

'ಮಲಗ್ಲಿ ಬಿಡಿ ಅತ್ತೇ, ಗಂಡ ಅಲ್ವಾ?' ವಹಿಸಿಕೊಂಡು ಮಾತಾಡಿದ್ದಳು ಸೀತಾಲಕ್ಷ್ಮಿ. ಹೆಂಡತಿಯನ್ನು ಜೋಪಾನ ಮಾಡುವ, ಅವಳ ಮಾತಿಗೆ ಬೆಲೆ ಕೊಡುವ ಮೈದುನನನ್ನು ಕಂಡು ಸೀತಾಲಕ್ಷ್ಮಿಗೆ ಏನೇನೋ ಅನಿಸುತ್ತಿತ್ತು. ಒಂದೇ ತಾಯಿಯ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳಾದರೂ ಸ್ವಭಾವದಲ್ಲಿ ಅಜಗಜಾಂತರ. ಶಿವರಾಮ ಹೀಗೇ ಇದ್ದಿದ್ದರೆ ಹೇಗಿರುತ್ತಿತ್ತು ಎನ್ನುವ ಕಲ್ಪನೆ. ಯಾಕೋ ಶಿವರಾಮನಿಗೆ ತಮ್ಮನ ಹೆಂಡತಿಯ ಮೇಲೆ ಸದಭಿಪ್ರಾಯ ಹುಟ್ಟಲಿಲ್ಲ. ತಾಳಿ ಕಟ್ಟಿದ ಗಂಡನನ್ನು ಬೆರಳ ತುದಿಯಲ್ಲಿ ಕುಣಿಸುತ್ತಿದ್ದಾಳೆ ಎಂದು ಅವನ ಅನಿಸಿಕೆ. ಅವಳಿದ್ದಿದ್ದೂ ಹಾಗೇ. 'ಬನ್ರೀ ಇಲ್ಲಿ...' ಎಂದು ಎಲ್ಲೋ ಇದ್ದ ಗಂಡನನ್ನು ಕರೆಯಲು ಅವಳಿಗೆ ಮನೆಯಲ್ಲಿ ಬೇರೆ ಹಿರಿಯರಿದ್ದಾರೆ ಎನ್ನುವ ಮುಜುಗರ ಇರಲಿಲ್ಲ. ಮುಂಚೇಕಡೆಯ ಕುರ್ಚಿಯ ಮೇಲೆ ಕೂರಲು, ಮೇಜಿನ ಮೇಲಿದ್ದ ಪೇಪರು ಕೈಗೆತ್ತಿಕೊಂಡು ಓದಲು, ಗಂಡ ಇರಲಿ, ಬಾವ ಇದ್ದಾರೆಂಬ ಅಂಜಿಕೆ ಕೂಡಾ ಇರದೇ ಇದ್ದುದು ಸರ್ವಾಧಿಕಾರಿ ಮನೋಧರ್ಮದ ಶಿವರಾಮನಿಗೆ ದೊಡ್ಡ ಅಪರಾಧವಾಗಿ ಕಾಣುತ್ತಿತ್ತು. 'ಯಾರ್ಯಾರು ಎಲ್ಲೆಲ್ಲಿರಬೇಕೋ ಅಲ್ಲಲ್ಲೇ ಇರಬೇಕು' ಎಂಬುದು ಅವನ ಮನೋಧರ್ಮ.

ಹೆಂಗಸರು ಅಂದರೇನು, ಮನೆಯ ಆಳುಗಳ ಜೊತೆ ಕೂಡಾ ಎಗ್ಗಿಲ್ಲದೆ ಮಾತಾಡುವುದೆಂದರೇನು? ಅಡುಗೆ ಮನೆಯ ಹೊರಗೆ ಹೆಣ್ಣು ಹೆಂಗಸರನ್ನು ಕಲ್ಪಿಸಿಕೊಳ್ಳಲಾಗದ ಚಿತ್ತಕ್ಕೆ ಇಂಥ ವರ್ತನೆ ಬಿಸಿ ತುಪ್ಪ. ನಾದಿನಿಯ ಯಾವುದೋ ನಡೆನುಡಿ ಅಸಮಾಧಾನ ತರಿಸಿದಾಗ ಅದನ್ನು ತೀರಿಸಿಕೊಳ್ಳುತ್ತಿದ್ದುದು ಯಾರ ಮೇಲೆ? ಪಾಪದ ಸೀತಾಲಕ್ಷ್ಮಿಯ ಮೇಲೆ. ವಾರಗಿತ್ತಿ ಇದ್ದಾಳೆಂದು ಅಪರೂಪಕ್ಕೆ ಸೀತಾಲಕ್ಷ್ಮಿ ಮುಂಚೇಕಡೆಗೆ ಬಂದರೆ ಶಿವರಾಮನ ಹುಬ್ಬು ಗಂಟಾಗುತ್ತಿತ್ತು. 'ಇವಳಿಗೂ ಕನಕನ ಗಾಳಿ ಬೀಸಿತಾ?' ಎನ್ನುವ ಸಿಡುಕು. 'ಹೋಗಿ ಒಂದ್ಲೋಟ ಕಾಫಿ ತಗಂಬಾರೇ...' ಎಂದು ಹೆಂಡತಿಯನ್ನು ಒಳಗಟ್ಟುವ ಬುದ್ಧಿವಂತಿಕೆ. ಕನಕನಿಗೆ ಇದೆಲ್ಲಾ ಪ್ರತ್ಯೇಕವಾಗಿ ಅರ್ಥ ಮಾಡಿಸಬೇಕಿರಲಿಲ್ಲ. ಬಾವಯ್ಯನ ತೋರುಬೆರಳು ತನ್ನ ಕಡೆ ಎಂದು ಅವಳಿಗೆ ಗೊತ್ತು. ಆ ಕಾಲಕ್ಕೆ ತೀರಾ ಅಪರೂಪವಾಗಿದ್ದ ಕನಕನ ಎದೆಗಾರಿಕೆ ಕಂಡು ಬೆಟ್ಟು ಕಚ್ಚಿಕೊಳ್ಳುತ್ತಿದ್ದಳು ಸೀತಾಲಕ್ಷ್ಮಿ. ಅರ್ಥವಾಗುತ್ತಿತ್ತು ಅವಳಿಗೆ. ವೆಂಕಟರಾಮು ಪಾಪದವನಾಗಿದ್ದರಿಂದಲೇ ಇವಳು ಅಟ್ಟ ಹತ್ತಿ ಕೂತಿದ್ದಾಳೆ. ಹಾಗೆಂದುಕೊಳ್ಳುವುದೂ ಹೊಟ್ಟೆ ಉರಿಯ ಮತ್ತೊಂದು ರೂಪವೇ? ಇರಬಹುದು. ಅದೇನು ಬ್ರಹ್ಮನ ನ್ಯಾಯವೋ? ಹೆಂಡತಿ ಜೋರಾಗಿದ್ದರೆ ಗಂಡ ಪಾಪದವನು. ಗಂಡ ಜೋರಾಗಿದ್ದರೆ ಹೆಂಡತಿ. ತನ್ನಂಥವರ ಸಂಖ್ಯೆಯೇ ನೂರಕ್ಕೆ ತೊಂಬತ್ತೆಂಟು. ಬಾಕಿ ಎರಡರಲ್ಲಿ ಬರುತ್ತಿದ್ದವರು ಕಮ್ಮಿ. ಗಂಡಸರೆಂದರೆ ಹಾಗಿರುತ್ತಿದ್ದರು, ಮಾತೆತ್ತಿದರೆ ಮೂಲೆಗೆ ಕೂರಿಸುವಷ್ಟು.

ಸೀತಾಲಕ್ಷ್ಮಿ ಮನೆ ಆಳಿನ ಹತ್ತಿರ ನೇರಳೆ ಹಣ್ಣಿನ ಬೇಡಿಕೆ ಮುಂದಿಟ್ಟಿದ್ದಳಲ್ಲ, ಇದು ವೆಂಕಟರಾಮುವಿನ ಮದುವೆ ಆಗುವುದಕ್ಕೆ ಸ್ವಲ್ಪ ಮುಂಚೆ ನಡೆದ ಘಟನೆ. ನೇರಳೆಹಣ್ಣಿನ ಗೊಂಚಲು ಗೊಂಚಲನ್ನೇ ಮರ ಹತ್ತಿ ಕುಯ್ದು ತಂದುಕೊಟ್ಟಿದ್ದ ಆಳು. ಹಿತ್ತಲ ಬಾಗಿಲಲ್ಲಿ ಬಂದು ನಿಂತವನಿಗೆ ಕೃತಜ್ಞತಾಪೂರ್ವಕವಾಗಿ ಒಂದು ಲೋಟ ಕಾಫಿ ತಂದುಕೊಟ್ಟಿದ್ದಳು ಸೀತಾಲಕ್ಷ್ಮಿ. ತಂದು ಕೊಡುವುದು ಅಂದರೆ ಕಾಫಿ ಲೋಟವನ್ನೇ ಕೊಡುವುದಲ್ಲ. ಆಳುಗಳಿಗೆ ಕೊಡುವುದಕ್ಕಾಗಿಯೇ ಹಿತ್ತಲ ಕಟಕಿದಂಡೆಯಲ್ಲಿ ಎರಡು ಸಿಲವಾರದ ಲೋಟ ಇಟ್ಟಿರುತ್ತಿದ್ದರು. ಅದನ್ನು ಹಿಡಿದು ಅವರು ಕಾಫಿ ಹಾಕಿಸಿಕೊಂಡು ತೊಳೆದ ಮೇಲೆ ಅಲ್ಲೇ ಕವುಚಿಡಬೇಕು. ಕಾಫಿ ಹಾಕಿದಳು ಸೀತಾಲಕ್ಷ್ಮಿ. ಅವನು ಎಲೆಕೊಟ್ಟೆಯಲ್ಲಿ ಹಾಕಿ ತಂದ ಹಣ್ಣುಗಳನ್ನು ಆಸ್ಥೆಯಿಂದ, ಅಕರಾಸ್ಥೆಯಿಂದ ಎರಡೂ ಕೈ ನೀಡಿ ಪಡೆದುಕೊಂಡಳು. ಸಂದರ್ಭಗಳು ಸೃಷ್ಟಿ ಆಗುವುದೇ ಹೀಗೆ. ಯಾವುದು ಆಗಬಾರದು ಅಂದುಕೊಂಡಿರುತ್ತಾರೋ ಅದು ಆಗಿ ಬಿಡುವುದು. ಹೆದರುವುದಕ್ಕೇನಿರಲಿಲ್ಲ. ಆದರೂ ಹಿತ್ತಲ ಬಾಗಿಲಲ್ಲಿ ಅನಿರೀಕ್ಷಿತವಾಗಿ ಗಂಡನ ದರ್ಶನವಾಗಿದ್ದನ್ನು ನೋಡಿ ಸೀತಾಲಕ್ಷ್ಮಿ ಸಣ್ಣಗೆ ಕಂಪಿಸಿದಳು.

'ಏನು ವ್ಯವಾರ ನಡೀತಿದೆ?' ಶಿವರಾಮನ ದನಿಯಲ್ಲಿ ಅಸಹನೆ.

'ಎಂತಿಲ್ಲ ಅಯ್ಯ. ಸಣ್ಣಮ್ಮ ನೇರಳೇಹಣ್ಣು ಬೇಕಂದ್ರು. ಕಾನಿಂದ ತಂದ್ಕೊಟ್ಟೆ...'

ಎಷ್ಟು ಸಣ್ಣ ವಿಷಯ. ಎಷ್ಟು ದೊಡ್ಡ ವಿಚಾರಣೆ.

'ನನ್ನ ಕೇಳಿ ತರೋದಲ್ವಾ? ಹೆಂಗಸ್ರು ಏನೇನೋ ಕೇಳ್ತಾರೆ. ಮನೆ ಯಜಮಾನನ ಕಿವಿಗೆ ಒಂದು ಮಾತು ಹಾಕ್ಬೇಕಾ, ಬ್ಯಾಡ್ವಾ?'

ಪೆಚ್ಚು ನಗೆ ನಕ್ಕ ಆಳು. ಇದರಲ್ಲಿ ಕೇಳುವುದಕ್ಕೇನಿದೆ ಎಂದು ಬಹುಶಃ ಅವನಿಗೂ ಅರ್ಥವಾಗಿರಲಿಕ್ಕಿಲ್ಲ.

'ಇವತ್ತು ನೇರಳೇಹಣ್ಣು ಕೇಳಿದ್ಲು. ನಾಳೆ ಮತ್ತೊಂದೇನೋ ಬಯಕೆ ಆಗುತ್ತೆ. ದಿವಸಾ ಸಾಯಂಕಾಲ ಬಟ್ಟಿ ಸಾರಾಯಿ ಕುಡಿಯೋಕೆ ಹೋಗ್ತೀಯಲ್ಲ, ಬೇಕು ಅಂದ್ರೆ ಅದನ್ನೂ ತಂದ್ಕೊಟ್ಟೇ ಬಿಡ್ತೀಯಾ?'

'ತಮಾಷಿ ಮಾಡ್ಬೇಡಿ ಅಯ್ಯ...' ಎನ್ನುತ್ತಾ ತಲೆ ತುರಿಸಿಕೊಂಡಿದ್ದ ಆಳು.

'ಇವತ್ತಿಗೆ ಕೊನೆ. ನನ್ನ ಕೇಳ್ದೆ ಮನೆ ಹೆಂಗಸರ ಹತ್ರ ಹಿತ್ತಲ ಬಾಗಿಲಲ್ಲಿ ವ್ಯವಾರ ನಡೀಬಾರ್ದು. ಆಯ್ತು, ಕಾಫಿ ಕುಡ್ಕಂಡು ಗಾಡಿ ಬಿಡು.'

ಸೀತಾಲಕ್ಷ್ಮಿಗೆ ಅರ್ಥವಾಗಿತ್ತು. ನೇರಳೇಹಣ್ಣು ಬಯಸಿದ್ದಕ್ಕಲ್ಲ ಈ ವ್ಯಂಗ್ಯ. ಗಂಡನ ಕಿವಿಗೆ ಹಾಕದೆ ತರಿಸಿಕೊಂಡಿದ್ದಕ್ಕೆ. ಅವನ ಕಣ್ಣ ಮರೆಯಲ್ಲಿ ಈ ಮನೆಯಲ್ಲಿ ಏನೂ ನಡೆಯಬಾರದು. ಏನಿದ್ದರೂ ಅವನು ಹೇಳಬೇಕು, ಉಳಿದವರು ಕೇಳಬೇಕು. ಎರಡನೇ ಪಾಠ ಕಲಿತಳು ಸೀತಾಲಕ್ಷ್ಮಿ. ದನಿಯೆತ್ತಿ ಮಾತಾಡಿ ಅಂಕೆಯಲ್ಲಿಟ್ಟುಕೊಳ್ಳುತ್ತಾರೆಂಬುದು ಮೊದಲ ಪಾಠ. ಕೆಲಸದವರ ಎದುರು ಮನೆ ಹೆಂಗಸರಿಗೆ ಗದರಿ ಹದ್ದುಬಸ್ತಿನಲ್ಲಿಟ್ಟುಕೊಂಡಿದ್ದೇವೆಂದು ಮೀಸೆ ತಿರುವುತ್ತಾರೆಂಬುದು ಎರಡನೇ ಪಾಠ. ಕಾರಣ ದೊಡ್ಡದಿರಬೇಕೆಂದೇನೂ ಇಲ್ಲ. ಅಹಂಕಾರಕ್ಕೆ ತೃಪ್ತಿಯಾದರೆ ಸೈ. ಸೀತಾಲಕ್ಷ್ಮಿಗೆ ಕ್ರಮೇಣ ಅರಿವಾದಂತೆ, ಹೆಂಗಸರಿಂದ ಮತ್ತಷ್ಟು ನಿರೀಕ್ಷೆಗಳಿದ್ದುವು ಶಿವರಾಮನಿಗೆ. ಯಾವಾಗಲೂ ಮೈ ತುಂಬಾ ಸೆರಗು ಹೊದ್ದಿರಬೇಕು. ಗಂಡಸರು ಮಾತಾಡುವಲ್ಲಿ ಸುಳಿಯಬಾರದು. ಕೆಲಸದ ಆಳುಗಳೊಡನೆ ಕುಶಾಲಾಗಿರಬಾರದು. ಅದರಲ್ಲೂ ಮಂಜು ಸೇರೇಗಾರರ ಎದುರು ಹೆಂಡತಿ ಸುಳಿದರೆ ಸೈರಣೆಯಾಗುತ್ತಿರಲಿಲ್ಲ ಶಿವರಾಮನಿಗೆ. ಅವರಿಗೆ ಕಾಫಿ ಕೊಡಬೇಕೆಂದರೆ ಖುದ್ದು ಶಿವರಾಮನೇ ಒಳಗೆ ಬಂದು ತೆಗೆದುಕೊಂಡು ಹೋಗುತ್ತಾನೆ. ಇಲ್ಲದಿದ್ದರೆ ತಮ್ಮನಿಗೆ ಹೇಳುತ್ತಾನೆ. ಸದಾ ಮುಖಕ್ಕೊಂದು ನಗೆ ಅಂಟಿಸಿಕೊಂಡು ಲವಲವಿಕೆಯಿಂದಿರುವ ಸೇರೇಗಾರರಿಗೆ ಅಷ್ಟೂ ಜನ ಆಳುಮಕ್ಕಳನ್ನು ಮುಷ್ಟಿಯಲ್ಲಿಟ್ಟುಕೊಂಡಿರುವ ಗತ್ತು. ಅವರ ಅಗತ್ಯಗಳಿಗೆ ಸಾಲ ಕೊಟ್ಟು ಕನ್ನಡ ಜಿಲ್ಲೆಯಿಂದ ಕರೆದುಕೊಂಡು ಬರುವ ಯಜಮಾನಿಕೆ ಅವರದ್ದು. ಇಲ್ಲಿ ಜಮೀನ್ದಾರರಿಂದ ಅವರ ಕೂಲಿ ವಸೂಲಿ ಮಾಡಿ, ಸಾಲಕ್ಕೆ ವಜಾ ಹಾಕಿ, ಮಧ್ಯ ಜೇಬು ಭರ್ತಿ ಮಾಡಿಕೊಳ್ಳುವ ವ್ಯವಹಾರ. ಚೊಕ್ಕವಾಗಿರುವ ಮುಂಡು, ಅರೆತೋಳಿನ ಅಂಗಿ, ಮೇಲೊಂದು ಚೌಕುಳಿಯ ಕೆಂಪು ಟವೆಲ್ಲು, ಬೆರಳಿಗೆ ಹರಳಿನ ಉಂಗುರ, ಕಿವಿಗೆ ವಂಟಿ, ಕತ್ತಲು ಹೊತ್ತಲ್ಲಿ ಓಡಾಡುವ ಸಂದರ್ಭ ಬಂದರೆ ಕೈಯಲ್ಲೊಂದು ಬ್ಯಾಟ್ರಿ, ಅಂಗಿ ಜೇಬಲ್ಲಿ ತುಂಡು ಪೆನ್ಸಿಲ್ಲು, ಸಣ್ಣ ಲೆಕ್ಕದ ಬುಕ್ಕು.

ಸಂಸಾರವನ್ನು ಊರಲ್ಲಿ ಬಿಟ್ಟು ಘಟ್ಟ ಹತ್ತಿ ಬಂದಿರುವ ಅವರಿಗೆ ಕೆಲಸದಾಳುಗಳ ಪೈಕಿ ಒಬ್ಬ ಮನೋರಮೆ ಇರುತ್ತಿದ್ದಳು ಎನ್ನುವುದು ಎಲ್ಲರಿಗೂ ಗೊತ್ತಿದ್ದ ಗುಟ್ಟು. ಆ ಅವಳಿಗೆ ಮೈ ಮುರಿಯುವ ಕೂಲಿ ಕೆಲಸ ಮಾಡಬೇಕಾದ ಅಗತ್ಯ ಇಲ್ಲ. ಬಿಡಾರದೊಳಗಿದ್ದುಕೊಂಡು ಆಳುಗಳಿಗೆ ಹೊತ್ತುಹೊತ್ತಿಗೆ ಗಂಜಿಯೋ, ಅನ್ನವೋ, ಪದಾರ್ಥವೋ ಬೇಯಿಸಿಕೊಂಡಿದ್ದರೆ ಸೈ. ಇವೆಲ್ಲಾ ಹೇಳಿಕೆ ಮಾತುಗಳನ್ನು ಸೀತಾಲಕ್ಷ್ಮಿ ಕೇಳಿಸಿಕೊಂಡಿದ್ದೇ ವಿನಾ ಸತ್ಯ ಅವಳಿಗೆ ಗೊತ್ತಿಲ್ಲ. ಇಂಥ ಹಿನ್ನೆಲೆಯ ಸೇರೇಗಾರರು ಕೆಲಸದ ಅಗತ್ಯಗಳಿಗೆ ಆಳುಗಳನ್ನು ಪೂರೈಕೆ ಮಾಡುವುದಕ್ಕೆ, ತುಂಡು ಗುತ್ತಿಗೆ ವಹಿಸಿಕೊಂಡು ಕೃಷಿ ಕೆಲಸಗಳನ್ನು ಪೂರೈಸಿಕೊಡುವುದಕ್ಕೆ ಅನಿವಾರ್ಯವಾಗಿದ್ದರು. ಶಿವರಾಮ ಮೇಲೆ ಮೇಲೆ ಚೆನ್ನಾಗಿಯೇ ಮಾತಾಡಿಸಿಕೊಂಡು ಅವರನ್ನು ಹಿತದಲ್ಲಿಟ್ಟುಕೊಂಡಿದ್ದರೂ ಒಳಗೊಳಗೆ